ಶ್ರೀ ಬಿ. ರಮಾನಾಥ್ ರೈ:– ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಹೇಳಿದ್ದಾರೆ. ಅದನ್ನು ಹಣಕಾಸಿನ ಇಲಾಖೆಗೆ ಕಳುಹಿಸಿ ಅದನ್ನು ನಾವು ಮಾಡಿಸುತ್ತೇವೆ.

2. ವಿಷಯ:– ಹಾಸನ ತಾಲ್ಲೂಕು ಮೊಸಳೆಹೊಸಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಮತ್ತು ಹೊಳೆನರಸೀಪುರ ತಾಲ್ಲೂಕು ಹರಿಹರಪುರಗಳಲ್ಲಿರುವ ಸರ್ಕಾರಿ ಐ.ಟಿ.ಐ. ಕಾಲೇಜುಗಳಿಗೆ ಸರ್ಕಾರದಿಂದ ಜಮೀನು ಮಂಜೂರಾಗಿದ್ದರೂ ಸ್ವಂತ ಕಟ್ಟಡ ನಿರ್ಮಿಸದೇ ಇರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ:– ಹಾಸನ ತಾಲ್ಲೂಕು ಮೊಸಳೆಹೊಸಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ ಮತ್ತು ಹೊಳೆನರಸೀಪುರ ತಾಲ್ಲೂಕು ಹರಿಹರಪುರಗಳಲ್ಲಿರುವ ಸಕಾರಿ ಐ.ಟಿ.ಐ. ಕಾಲೇಜುಗಳಿಗೆ ಸರ್ಕಾರದಿಂದ ಜಮೀನು ಮಂಜೂರಾಗಿದ್ದರೂ ಸ್ವಂತ ಕಟ್ಟಡ ನಿರ್ಮಿಸದೇ ಇರುವ ಬಗ್ಗೆ ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ಸಚಿವರು):– ಮಾನ್ಯ ಅಧ್ಯಕ್ಷರೆ ಹೊಳೇನರಸೀಪುರ ತಾಲ್ಲೂಕು ಹರಿಹರಪುರ ಸರ್ಕಾರಿ ಐಟಿಐಗೆ 5–ಎಕರೆ ಜಮೀನು ಮಂಜೂರಾಗಿರುತ್ತದೆ. ಸರ್ಕಾರಿ ಐಟಿಐ ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವೃತ್ತಿ/ಘಟಕಗಳಿಗೆ ಅನುಗುಣವಾಗಿ ಡಿ.ಜಿ.ಇ.ಟಿ. ನವದೆಹಲಿ ಯಿಂದ ಸಂಯೋಜನೆ ಪಡೆಯಲು ಅವಶ್ಯವಾದ ಕಟ್ಟಡವನ್ನು ನಿರ್ಮಿಸಲು ನಕ್ಷೆಯನ್ನು ಮತ್ತು ಸವಿವರ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ನಬಾರ್ಡ್ ಕಛೇರಿಗೆ ಸಲ್ಲಿಸಲಾಗಿರುತ್ತದೆ. ನಬಾರ್ಡ್ ಪತ್ರ ಸಂ: NB(Karnataka)SPD/RIDF-05/2013–14, Dt: 04/03/2014 ಆರ್.ಐ.ಡಿ.ಎಫ್–19ರ ಅಡಿಯಲ್ಲಿ ₹ 304.12 ಲಕ್ಷಗಳ ಅಂದಾಜು ಮೊತ್ತದಲ್ಲಿ ಸ್ವಂತ ಕಟ್ಟಡ ನಿರ್ಮಿಸಲು

ಮಂಜೂರಾತಿಯನ್ನು ಪಡೆಯಲಾಗಿದೆ. ಸಧ್ಯದಲ್ಲಿಯೇ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಚನ್ನರಾಯಪಟ್ಟಣ ತಾಲ್ಲೂಕಿನ ಉದಯಪುರ ಸರ್ಕಾರಿ ಕೈಗಾರಿಕ ತರಬೇತಿ ಸಂಸ್ಥೆಯು 4–ಎಕರೆ ಸರ್ಕಾರಿ ಜಮೀನನ್ನು ಹೊಂದಿರುತ್ತದೆ. ಸದರಿ ನಿವೇಶದಲ್ಲಿ ₹ 50.00 ಲಕ್ಷಗಳ ವೆಚ್ಚದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲಾಗಿದೆ. ಸಂಸ್ಥೆಯ ಕಾರ್ಯನಿರ್ವಹಣೆಗೆ ಅವಶ್ಯಕವಾದ ಭಾಗಶಃ ಕಟ್ಟಡವನ್ನು ಬಾಡಿಗೆಗೆ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ.

ಹೊಳೆನರಸೀಪುರ ತಾಲ್ಲೂಕಿನ ಮೊಸಳೇಹೊಸಳ್ಳಿಯಲ್ಲಿ ಸರ್ಕಾರಿ ಐಟಿಐ 2007ರಲ್ಲಿ ಪ್ರಾರಂಭವಾಗಿದ್ದು, 3–ಎಕರೆ ಸರ್ಕಾರಿ ಜಮೀನು ಮೇ–2014ರಲ್ಲಿ ಮಂಜೂರಾಗಿರುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ನಿರ್ದೇಶನಾಲಯದ ಮೂಲಕ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗಳ ಕಟ್ಟಡ ನಿರ್ಮಾಣವನ್ನು ನಬಾರ್ಡ್ ನೆರವಿನ ಮುಖಾಂತರ ಮಾತ್ರ ನಿರ್ಮಾಣ ಮಾಡಲಾಗುತ್ತಿದೆ. ಹಾಗೂ ಇಲಾಖೆಯಲ್ಲಿ ರಾಜ್ಯ ಸರ್ಕಾರದ ಅನುದಾನ ಪಡೆಯಲು ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇಲ್ಲದಿರುವುದರಿಂದ ಹೊಸ ಸರ್ಕಾರಿ ಕೈಗಾರಿಕ ತರಬೇತಿ ಸಂಸ್ಥೆಗಳ ಕಟ್ಟಡ ನಿರ್ಮಾಣಕ್ಕೆ ಅನುಕೂಲವಾಗುವ, ಹಿನ್ನೆಲೆಯಲ್ಲಿ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಪಡೆಯಲು ಆರ್ಥಿಕ ಇಲಾಖೆಯನ್ನು ಕೋರಲಾಗುವುದು.

ಹೊಳೇನರಸೀಪುರ ತಾಲ್ಲೂಕು ಹರಿಹರಪುರ ಸರ್ಕಾರಿ ಐಟಿಐ ಕಾಲೇಜಿಗೆ 5 ಎಕರೆ ಜಮೀನು ಈಗಾಗಲೇ ಸಿಕ್ಕಿದೆ. ಐಟಿಐ ಕಾಲೇಜಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವೃತ್ತಿ ಕೋರ್ಸ್‌ಗಳಿಗೆ ಏನೇನು ಬೇಕಾಗಿದೆಯೋ ಅವೆಲ್ಲವನ್ನು ಕೊಡತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಈಗಾಗಲೇ ಆ ಕಟ್ಟಡವನ್ನು ನಿರ್ಮಾಣ ಮಾಡಲಿಕ್ಕೆ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರು ಮಾಡಿ RIDFಗೆ ಸಲ್ಲಿಸಿದ್ದೇವೆ. ಇದಕ್ಕೆ ಮಂಜೂರಾತಿ ಕೂಡ ಆಗಿದೆ. ಆದಷ್ಟು ಬೇಗ ಅಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ನಾವು ಮುಂದಾಗುತ್ತೇವೆ. ಹಾಗೆಯೇ ಚನ್ನರಾಯಪಟ್ಟಣ ತಾಲ್ಲೂಕು ಉದಯಪುರ

ಸರ್ಕಾರಿ ಐಟಿಐ ಕಾಲೇಜಿನ ಬಗ್ಗೆ ಕೂಡ ಮಾನ್ಯ ರೇವಣ್ಣನವರು ಕೇಳಿದ್ದಾರೆ. ಸದರಿ ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ನಾಲ್ಕು ಎಕರೆ ಜಮೀನು ಇದೆ. 50 ಲಕ್ಷ ರೂಪಾಯಿ ವೆಚ್ಚದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡಿದ್ದೇವೆ. ಸಂಸ್ಥೆಗೆ ಅವಶ್ಯಕತೆ ಇರತಕ್ಕಂಥ ಭಾಗಶಃ ಕಟ್ಟಡವನ್ನು ಬಾಡಿಗೆಗೆ ತೆಗೆದುಕೊಂಡು ಕಾಲೇಜನ್ನು ನಡೆಸುತ್ತಿದ್ದೇವೆ.

ಅಧ್ಯಕ್ಷರು:– ಕಟ್ಟಡ ಕಟ್ಟುವ ವಿಚಾರ ಬಗ್ಗೆ ಕೇಳಿದ್ದಾರೆ.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, 50 ಲಕ್ಷ ರೂಪಾಯಿ ವೆಚ್ಚದಲ್ಲಿ ಈಗಾಗಲೇ ಕಟ್ಟಡವನ್ನು ನಿರ್ಮಾಣ ಮಾಡಿದ್ದೇವೆ. ಇನ್ನೂ ಬೇಕಾಗಿರುವಂಥದಕ್ಕೆ ಬಾಡಿಗೆ ಕಟ್ಟಡ ತೆಗೆದುಕೊಂಡು ಕಾಲೇಜು ನಡೆಸಲಾಗುತ್ತಿದೆ. ಉಳಿದಂಥದನ್ನು ಮುಂದೆ ಮಾಡಿಕೊಡುತ್ತೇವೆ

ಅಧ್ಯಕ್ಷರು:– ok, ಆಯಿತು ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಹಾಸನ ತಾಲ್ಲೂಕು ಮೊಸಳೆಹೊಸಳ್ಳಿಯಲ್ಲೊಂದು ಐಟಿಐ ಕಾಲೇಜು ಇದೆ. ಇಲ್ಲಿಯೂ ಕೂಡ ಕಟ್ಟಡ ಆಗಿಲ್ಲ. ಇದು sanction ಆಗಿ 7 ವರ್ಷಗಳಾಗಿವೆ. ಚನ್ನರಾಯಪ್ಪಣ ತಾಲ್ಲೂಕಿನ ಉದಯಪುರದಲ್ಲಿರುವ ಕಾಲೇಜಿಗೆ 7 ವರ್ಷದಲ್ಲಿ 50 ಲಕ್ಷ ರೂಪಾಯಿ ಕಟ್ಟಡವನ್ನು ಕಟ್ಟಲಾಗಿದೆ. ಇವತ್ತೂ ಸಹ ಅಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾಲೇಜು ನಡೆಸುತ್ತಿದ್ದಾರೆ. ಆದ್ದರಿಂದ, ಈ ಎರಡು ಕಾಲೇಜಿಗೆ ಕಟ್ಟಡವನ್ನು ನಿರ್ಮಾಣ ಮಾಡಿಕೊಡುವ ಬಗ್ಗೆ ಮಾನ್ಯ ಕಾರ್ಮಿಕ ಸಚಿವರು ದಯಮಾಡಿ ಹೇಳಬೇಕು.

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, ಹೊಳೆನರಸೀಪುರ ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ 2007ರಲ್ಲಿ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ. ಮೇ ತಿಂಗಳ 2014ರಲ್ಲಿ ಅದಕ್ಕೆ 3 ಎಕರೆ ಜಮೀನು ಲಭ್ಯವಾಗಿದೆ. ಉದ್ಯೋಗ ಮತ್ತು ತರಬೇತಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆ ಇಲ್ಲ. ಆದ್ದರಿಂದ, ಪ್ರತ್ಯೇಕ ಲೆಕ್ಕ ಶೀರ್ಷಿಕೆ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

ಅಧ್ಯಕ್ಷರು:– ಅದು ಆಗುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಹೇಳಿ?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ:– ಮಾನ್ಯ ಅಧ್ಯಕ್ಷರೆ, ಪ್ರತ್ಯೇಕ ಲೆಕ್ಕ ಶೀರ್ಷಿಕೆ ಮೊದಲು ಆಗಬೇಕು. ಇದು ಆದ ತಕ್ಷಣವೇ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

3. ವಿಷಯ:– ಕೊರಟಗೆರೆ ವಿದಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮುಲಭೂತ ಸೌಕರ್ಯಗಳ ಕೊರತೆಯಿಂದ ಹಾಗೂ ಐ.ಇ.ಆರ್.ಟಿ. ಶಿಕ್ಷಕರ ನೇಮಕಾತಿಯಾಗದೇ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿರುವುದಕ್ಕೆ ಸಂಬಂಧಿಸಿದ ಬಗ್ಗೆ.

ಶ್ರೀ ಪಿ.ಆರ್. ಸುಧಾಕರ ಲಾಲ್ (ಕೊರಟಗೆರೆ):–ವಿಷಯ:– ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಐಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಹಾಗೂ ಐ.ಇ.ಆರ್.ಟಿ. ಶಿಕ್ಷಕರ ನೇಮಕಾತಿಯಾಗದೇ ಅಲ್ಲಿನ ವಿದ್ಯಾರ್ಥಿಗಳಿಗೆ ತೊಂದರೆಯುಂಟಾಗುತ್ತಿರುವುದಕ್ಕೆ ಸಂಬಂಧಿಸಿದ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಶಾಸನರಚನೆ, ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಪರವಾಗಿ):– ಮಾನ್ಯ ಸಭಾಧ್ಯಕ್ಷರೆ,

ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಂಡು ಬಂದಿರುವ ಮೂಲಭೂತ ಸೌಲಭ್ಯಗಳ ಕೊರತೆಯನ್ನು ನಿವಾರಿಸಿ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಲಾಗುತ್ತಿದೆ. ಸಾಮಾನ್ಯವಾಗಿ ಕಂಡು ಬರುವ ಮೂಲಭೂತ ಸೌಕರ್ಯಗಳಾದ ಕಾಂಪೌಂಡ್, ಆಟದ ಮೈದಾನ, ರ್‍ಯಾಂಪ್ಸ್, ಶೌಚಾಲಯ, ಶಾಲಾ ಕೊಠಡಿ, ಕುಡಿಯುವ ನೀರು, ವಿದ್ಯುಚ್ಚಕ್ತಿ